ಸಿ. ಸಿ. ನಂ.- **1047/23**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **15-11-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಆರೋಪಿ ಪರ ಶ್ರೀ ಕೆ ವಿ ಬಿ ವಕೀಲರಿಂದ -

ದಿಃ **20.08.2023** ರಂದು ವಕೀಲರ ಮುಖಾಂತರ ನಾನು ಆರೋಪಿಗೆ ನೋಟೀಸ್ ಕೊಟ್ಟಿರುತ್ತೇನೆ ಎಂದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಡಿಪಸಿರುತ್ತೇನೆ ಆದರೆ ಅದರ ಅಂಚೆ ರಸೀದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-**4** ಅಂಚೆ ಸ್ವೀಕೃತಿ ಪ್ರತಿಗೆ ಸಂಬಂಧಪಟ್ಟ ಅಂಚೆ ರಸೀದಿಯನ್ನು ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ನಿಪಿ-**5** ಮತ್ತು ನಿಪಿ-**6** ಆರ್ ಪಿ ಎ ಡಿ ಕವರ್ ಗಳ ಮೇಲೆ ಇರುವ ದಿನಾಂಕಗಳು ಒಂದೇ ಆಗಿದ್ದು, ಅದು ದಿಃ **25.08.2023** ಆಗಿರುತ್ತದೆ ಎಂದರೆ ಸರಿ. ಹೀಗೆ ವಕೀಲರ ಮುಖಾಂತರ ಆರೋಪಿಗೆ ಕಳುಹಿಸಿದ ನೋಟೀಸ್ ನ ದಿನಾಂಕವನ್ನು **20.08.2023** ಎಂದು ದೂರಿನಲ್ಲಿ ಬರೆಯಲಾಗಿದೆ ಎಂದರೆ ಸರಿ. ದಿಃ **25.08.2023** ದಿನಾಂಕದ ಬಗ್ಗೆ ದೂರಿನಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ ದೂರು ಕಾಲ ಪರಿಮಿತಿಯ ಹೊರಗೆ ಇದೆ ಎಂದರೆ ಸರಿಯಲ್ಲ. ಹೊಸಪೇಟೆಯ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಹಾಗೂ ಜೆ ಎಂ ಎಫ್ ಸಿ ಯಲ್ಲಿ ಸಿಸಿ ಸಂ.**831**ಃ**20** ಪ್ರಕರಣ ಕಲಂ.**420** ಐ ಪಿ ಸಿ ರಡಿಯಲ್ಲಿ ದಾಖಲಾಗಿದೆ ಎಂದರೆ ಇರಬಹುದು ಆದರೆ ಈ ಪ್ರಕರಣಕ್ಕೆ ಸಂಬಂಧ ಇಲ್ಲ. ಸದರಿ ಪ್ರಕರಣದಲ್ಲಿ ನಾನು ಆರೋಪಿ ಸಂ.**2** ಆಗಿರುತ್ತೇನೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

**1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.